**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ</u>**
**<u>ಚಿಂಚೋಳಿ</u>**

***<u>ಸಿ. ಸಿ. ನಂ. 1134/2025</u>***

**ಫಿರ್ಯಾದಿ :** ಸರ್ಕಾರದ ಪರವಾಗಿ ಚಿಂಚೋಳಿ ಪೋಲೀಸರು.

- ವಿರುದ್ದ -

**ಆರೋಪಿತರುಃ**

1. ಹರ್ಷವರ್ಧನ ತಂದೆ ದುರೇಂದ್ರ ಮ್ಯಾಕಲ್.
2. ದುರೇಂದ್ರ ತಂದೆ ನರಸಿಂಗರಾವ ಮ್ಯಾಕಲ.
3. ಶೈಲಜಾ ಗಂಡ ಹರ್ಷವರ್ಧನ ಮ್ಯಾಕಲ.
4. ಸರೋಜಾ ಗಂಡ ಗುರೇಂದ್ರ ಮ್ಯಾಕಲ.
5. ನಿರ್ಮಲಾ ಗಂಡ ಅರವಿಂದ ಮ್ಯಾಕಲ.

**ದೋಷಾರೋಪಣೆ**

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ, ಆರೋಪಿರಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ.

ದಿನಾಂಕಃ 06-12-2024 ರಂದು ಸಾಯಂಕಾಲ 07-00 ಗಂಟೆ ಸುಮಾರಿಗೆ ಚಿಂಚೋಳಿ ಪೋಲಿಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಚಿಂಚೋಳಿಯ ಜೋಷಿಗಲ್ಲಿಯಲ್ಲಿ ಚಾಸಾ-1 ಬಸ್ಸಮ್ಮ ನೇದ್ದವರ ಮನೆಯ ಹತ್ತಿರ ಆರೋಪಿತರೆಲ್ಲರೂ ಹೊಡೆಯುವ ಏಕೋದ್ದೇಶದಿಂದ ಗುಂಪು ಕಟ್ಟಿಕೊಂಡು ಬಂದ ಕಾರಣ, ಆ ಮೂಲಕ ಭಾರತಿಯ ನ್ಯಾಯಾ ಸಂಹಿತೆ ಕಲಂ 189(2) ಸಹವಾಚಕ ಕಲಂ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು.

2. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿತರೆಲ್ಲರೂ ಹೊಡೆಯುವ ಏಕೋದ್ದೇಶದಿಂದ ಬಂದು ಸದರಿ ಅಕ್ರಮ ಕೂಟದ ಸದಸ್ಯರಾಗಿದ್ದರಿಂದ ಆ ಮೂಲಕ ಭಾರತಿಯ ನ್ಯಾಯಾ ಸಂಹಿತೆ ಕಲಂ 191(2) ಸಹವಾಚಕ ಕಲಂ 190 ರ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

3. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಚಾಸಾ-1 ಬಸ್ಸಮ್ಮ ನೇದ್ದವರ ಮನೆಯಲ್ಲಿ ದೇವರ ಕಾರ್ಯಕ್ರಮ ಇದ್ದು ಸಂಬಂಧಿಕರು ನಮ್ಮ ಮನೆಗೆ ಊಟಕ್ಕೆ ಬರುವುದರಿಂದ 1ನೇ ಆರೋಪಿ ನೀನು ಬೇಕೆಂತಲೆ ದಾರಿ ಮೇಲೆ ನೀರು ಚಲ್ಲುತ್ತಿದ್ದನು. ಆಗ ಚಾಸಾ-4 ಅನೀಲಕುಮಾರ ನೇದ್ದವನು 1ನೇ ಆರೋಪಿಗೆ ನಮ್ಮ ಮನೆಗೆ ಜನರು ಬರುವವರಿದ್ದಾರೆ ನೀರು ಚೆಲ್ಲಬೇಡಿ ಅಂತಾ ಅಂದಿದ್ದಕ್ಕೆ ರಂಡಿ ಮಗನಾ, ಬೋಸಡಿ ಮಗನಾ ನೀ ಯಾರ ಕೇಳಾಕ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಆ ಮೂಲಕ ಭಾರತೀಯ ನ್ಯಾಯ ಸಂಹಿತೆ ಕಲಂ 352 ಸಹವಾಚಕ ಕಲಂ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತಿಯೆಂದು,

4. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-5 ಮಾರುತಿ ನೇದ್ದವನಿಗೆ ಕೈಯಿಂದ ಬೆನ್ನಿಗೆ ಹೊಡೆದ ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ 115(2) ಸಹವಾಚಕ ಕಲಂ 190 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

5. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು 1ನೇ ಆರೋಪಿ ನೀನು ಚಾಸಾ-5 ಮಾರುತಿ ನೇದ್ದವನಿಗೆ ಬಡಿಗೆಯಿಂದ ಕಾಲಿಗೆ ಹೊಡೆದ ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ 118(1) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

6. ಮೇಲೆ ಹೇಳಿದ ಸ್ಥಳ, ಸಮಯ ಮತ್ತು ದಿನಾಂಕದಂದು ಆರೋಪಿ ನೀವು ಚಾಸಾ-1 ಬಸ್ಸಮ್ಮ ನೇದ್ದವಳಿಗೆ ನಿಮಗೆ ಹೊಡೆದು ಖಲಾಸ ಮಾಡ್ತೀನಿ ಅಂತಾ ಜೀವ ಬೆದರಿಕೆ ಹಾಕಿದ ಕಾರಣ, ಆ ಮೂಲಕ ಭಾರತೀಯ ನ್ಯಾಯ ಸಂಹಿತೆ 351(2) ಸಹವಾಚಕ ಕಲಂ 190 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು,

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?
ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?
ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 24.09.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.